ಎ-72-98

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಇವರು ನಿಯಮ 72 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.**

**ವಿಷಯ:** ಕಬ್ಬು ಬೆಳೆಯುವ ರೈತರಿಗೆ ಸಕಾಲದಲ್ಲಿ ಹಣ ಪಾವತಿಸಿದೇ ಇರುವುದು ಹಾಗೂ ಕಬ್ಬಿಗೆ ವೈಜ್ಞಾನಿಕವಾದ ಬೆಲೆ ನಿಗದಿಪಡಿಸುವಂತಹ ಗಂಭೀರ ವಿಚಾರವನ್ನು ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

**ಸರ್ಕಾರದ ಉತ್ತರ:**

ರಾಜ್ಯದಲ್ಲಿ ಒಟ್ಟು 88 ನೋಂದಾಯಿತ ಸಕ್ಕರೆ ಕಾರ್ಖಾನೆಗಳಿದ್ದು, ಇವುಗಳ ಪೈಕಿ 65 ಸಕ್ಕರೆ ಕಾರ್ಖಾನೆಗಳು ಕಾರ್ಯನಿರತವಾಗಿವೆ. ವಲಯವಾರು ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರ.ಸಂ. | ವಲಯ | ಕಾರ್ಯನಿರತ | ಸ್ಥಗಿತ | ಸಮಾಪನೆ | ಒಟ್ಟು |
|---|---|---|---|---|---|
| 1 | ಸಾರ್ವಜನಿಕ ವಲಯ | – | 02 | – | 02 |
| 2 | ಜಂಟಿ ವಲಯ | – | – | 01 | 01 |
| 3 | ಸಹಕಾರಿ ವಲಯ | 13 | 05 | 04 | 22 |
| 4 | ಸಹಕಾರಿ ವಲಯ (ಗುತ್ತಿಗೆ) | 08 | – | – | 08 |
| 5 | ಖಾಸಗಿ ವಲಯ | 44 | 11 | – | 55 |
| ಒಟ್ಟು | | **65** | **18** | **05** | **88** |

ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಳೆದ ಐದು ವರ್ಷಗಳಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ, ಪಾವತಿ ಮಾಡಿರುವ ಮತ್ತು ಬಾಕಿ ಕಬ್ಬು ಬಿಲ್ಲು ವಿವರಗಳು ಈ ಕೆಳಕಂಡಂತಿವೆ.

**ರೂ.ಕೋಟಿಗಳಲ್ಲಿ**

| ಕ್ರ.ಸಂ. | ಹಂಗಾಮು | ಪಾವತಿಸಬೇಕಾದ ಮೊತ್ತ | ಪಾವತಿಸಿದ ಮೊತ್ತ | ಬಾಕಿ ಇರುವ ಮೊತ್ತ |
|---|---|---|---|---|
| 1 | 2016–17 | 5,343.07 | 6,702.84 | ಬಾಕಿ ಇರುವುದಿಲ್ಲ. |
| 2 | 2017–18 | 9,851.83 | 10,605.12 | ಬಾಕಿ ಇರುವುದಿಲ್ಲ. |
| 3 | 2018–19 | 11,948.39 | 12,083.79 | 8.93 |
| 4 | 2019–20 | 10,428.96 | 10,671.94 | 5.80 |
| 5 | 2020–21 | 13,32,449.00 | 13,53,308.00 | ಬಾಕಿ ಇರುವುದಿಲ್ಲ. |

**ಷರಾ:** 2016–17 ರಿಂದ 2020–21ನೇ ಹಂಗಾಮುಗಳಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರವು ನಿಗದಿಪಡಿಸಿದ ಎಫ್.ಆರ್.ಪಿ ದರಕ್ಕಿಂತ ಹೆಚ್ಚಿಗೆ ಕಬ್ಬಿನ ಬಿಲ್ಲನ್ನು ರೈತರಿಗೆ ಪಾವತಿಸಿರುತ್ತವೆ.

2015–16ನೇ ಹಂಗಾಮಿನಲ್ಲಿ ಮೆ॥ ಶಿವಸಾಗರ ಶುಗರ್ಸ್ ಲಿ., ಉದಪುಡಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ – ಈ ಕಾರ್ಖಾನೆಯು ರೂ.11.65 ಕೋಟಿಗಳಷ್ಟು ಕಬ್ಬು ಬಿಲ್ಲು ಬಾಕಿ ಉಳಿಸಿಕೊಂಡಿದ್ದು, ದಿನಾಂಕ: 06.10.2016ರಂದು ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ ಇವರಿಗೆ ಬಾಕಿ ವಸೂಲಾತಿ ಪ್ರಮಾಣ ಪತ್ರವನ್ನು ಹೊರಡಿಸಲಾಗಿದೆ. ಮೆ॥ ಶಿವಸಾಗರ ಶುಗರ್ಸ್ ಲಿ., – ಈ ಕಾರ್ಖಾನೆಯು ಕಳೆದ ಐದು ಹಂಗಾಮುಗಳಿಂದ ನಿಷ್ಕ್ರೀಯವಾಗಿದ್ದು, ಸಕ್ಕರೆ ಉತ್ಪಾದನೆ ಇಲ್ಲದಿರುವುದರಿಂದ ಕಾರ್ಖಾನೆಯ ಇತರೆ

ಅದರಂತೆ ಕೇಂದ್ರ ಸರ್ಕಾರವು ಸದರಿ ಶಿಫಾರಸ್ಸಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿ ವರ್ಷ ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಗೊಳಿಸಿ ಘೋಷಿಸುತ್ತದೆ. ಕೇಂದ್ರ ಸರ್ಕಾರವು ನಿಗದಿಪಡಿಸುವ ಎಫ್.ಆರ್.ಪಿ. ದರವನ್ನು ಆಧರಿಸಿ ರಾಜ್ಯ ಸರ್ಕಾರವು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013 ಮತ್ತು ತಿದ್ದುಪಡಿ ಅಧಿನಿಯಮ 2014 ರ ಕಲಂ 4(ಎ) ರೀತ್ಯಾ ರಾಜ್ಯದ ಸಕ್ಕರೆ ಕಾರ್ಖಾನೆಗಳ ಸಕ್ಕರೆ ಇಳುವರಿಯನ್ನು ಆಧರಿಸಿ ಕಾರ್ಖಾನೆವಾರು ಎಫ್.ಆರ್.ಪಿ. ದರವನ್ನು ಘೋಷಣೆ ಮಾಡಲಾಗುತ್ತದೆ.

2021-22ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಕಾರ್ಖಾನೆಗಳಿಗೆ ಸರಬರಾಜು ಆಗುವ ಕಬ್ಬಿಗೆ ಮೊದಲನೇ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (ಎಫ್.ಆರ್.ಪಿ) ದಿನಾಂಕ:31.08.2021ರಂದು ಘೋಷಿಸಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.

1. ಶೇಕಡ 10.00 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ. 2900.00
2. ಶೇಕಡ 10.00ಕ್ಕೆ ಮೇಲ್ಪಟ್ಟು ಇಳುವರಿಯ ನಂತರದ ಶೇಕಡಾ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.2.90 ರಂತೆ ಹೆಚ್ಚುವರಿ ಬೆಲೆ.
3. ಶೇ.10.00ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕೆ ಮೇಲ್ಪಟ್ಟು ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 0.1ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.2.90ರ ಸರಾಸರಿಯಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು.
4. ಶೇಕಡ 9.5ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ. 2788.00ಗಳ ನ್ಯಾಯಯುತ ಮತ್ತು ಲಾಭದಾಯಕ ಬೆಲೆ.

ಕೇಂದ್ರ ಸರ್ಕಾರವು 2021-22ನೇ ಸಕ್ಕರೆ ಹಂಗಾಮಿಗೆ ನಿಗದಿಪಡಿಸಿರುವ ಎಫ್.ಆರ್.ಪಿ ಆಧಾರದ ಮೇಲೆ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ 2013 ಮತ್ತು ತಿದ್ದುಪಡಿ ಅಧಿನಿಯಮ 2014ರ ಕಲಂ 2(ii) (ಇಎ) ಮತ್ತು 9(1) ರನ್ವಯ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯನ್ನು ಆಧಾರವಾಗಿಟ್ಟುಕೊಂಡು ಕಾರ್ಖಾನೆವಾರು ಮೊದಲನೇ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ದಿನಾಂಕ: 29.10.2021ರ ಆದೇಶದಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿದೆ.

---

ಸಿಐ 369 ಸಿಓಎಫ್ 2021

(ಶಂಕರ ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು